ತಣ್ಣಗೆ ಅತಿ ಮೆಲ್ಲಗೆ ದೂರದಿಂದ ತೇಲಿಬಂದು ಆಳ ಮನದಾಳಕ್ಕೆ ಇಳಿವ ಯಾವುದೋ ಹೆಣ್ಣಿನ ನೀರವ ರಾತ್ರಿಯ ಹಾಡಿನ ಲಯದ ಹಾಗೆ ಇದೆಲ್ಲವೂ ತನ್ನ ಸುತ್ತಿಕೊಳ್ಳುತ್ತದೆಂದು ಅವನೆಂದೂ ಭಾವಿಸಿರಲಿಲ್ಲ. ಹೀಗೆ ಹಗಲೂ ರಾತ್ರಿ ನೂರಾರು ಗೌಲು ಗಂಧಗಳ ರಂಗು ತಬ್ಬಿಕೊಂಡು ಜೀವಕ್ಕೆ ಜೀವವನ್ನು ಬೆಸೆಯುವ ಹಾಗೆ ಆಗಿ ತನ್ನ ಸುಖದ ಸಿರಿಯಲ್ಲೆ ಕೊಲ್ಲುತ್ತಾ ಮತ್ತೆ ಮತ್ತೆ ಹುಟ್ಟು ಸಾವಿನ ಪಗಡೆಯಾಟದ ದಾಳಗಳ ಹಾಗೆ ತನ್ನನ್ನು ಆಡಿಸುತ್ತವೆ ಎಂದು ತಿಳಿದಿರಲಿಲ್ಲ. ಎಲ್ಲ ಇದೆಲ್ಲ ಹೇಗೆಯೋ ಆಗುತ್ತದೆಂದುಕೊಳ್ಳುತ್ತಾ, ಆತ ಎದುರೇ ಕುಳಿತ ಅವಳೆದುರು ತೆರೆದುಕೊಳ್ಳುವ ಅನಿವಾರ್ಯತೆಯಲ್ಲೂ ಆಗದ ಈಗ ಈ ಕಣದಲ್ಲಿ ತುಳುಕಿ ಬೀಳುವ ಕಣ್ಣೀರ ತುಳುಕಿಸದೆ, ಮತ್ತೆ ಹಾಗೇ ಕಣ್ಣ ಕಡಲಿಗೆ ಹಿಂತೆಗೆದುಕೊಳ್ಳಲಾರದೆ ಮಳೆಯಲ್ಲಿ ಅತ್ತಂತೆ ಕೊನೆಗೆ ನಗಾಡಿ ಅವಳ ಮುಖವನ್ನು ದಿಟ್ಟಿಸಿದ. ತೇಲುವ ಗಾಳಿಗೆ ಅದುರುವ ಮುಂಗುರುಳು ಮಾತ್ರವೇ ಹಾರಾಡುತ್ತ ಅವಳ ಬೆಳ್ಳನೆಯ ಕಣ್ಣುಗಳು ಏನನ್ನೋ ದಿಟ್ಟಿಸುತ್ತಾ ಈ ಕಣ್ಣ ಆಳದಲ್ಲಿ ಎಲ್ಲ ಸ್ಥಿತಿಗಳ ಚಿತ್ರಗಳೂ ತುಂಬಿವೆ ಎಂಬಂತೆ ನಿಂತಿದ್ದಳು. ಇಬ್ಬರ ನಡುವೆಯೂ ಮೌನ ಅತ್ತಿಂದಿತ್ತ ಗಸ್ತು ಹೊಡೆಯುತ್ತಿತ್ತು. ಇಬ್ಬರಿಗೆ  ಇಬ್ಬರೂ ಕೈಕೈಗೆ ಎಟುಕಿಸುತ್ತಿಲ್ಲವೇನೋ ಎಂಬಂತೆ ದೂರದೂರದಲ್ಲೇ ನಿಂತೇ ಇದ್ದರು. ಅಲ್ಲಿ ಕೆಂಪಗೆ ಸಾಲು ಮರಗಳ ಮೇ ಫ್ಲವರ್ ಹೂಗಳು ಕೆಳಗೆ ನೆಲದ ಮೇಲೆ ಉದುರಿ ಚಿತ್ತಾರ ಬಿಡಿಸಿದ ಕೆಂಪು ಬಳ್ಳಿಯ ಹಾಗೆ ಹಾಸಿಕೊಂಡಿದ್ದವು. ಹುಲ್ಲಿನ ಮೇಲೆ ಇಬ್ಬನಿ ಹನಿಗಳ ಮೇಲೆ ಸೂರ್ಯ ಒಡೆದು ಚೂರಾದಂತೆ ಅಲ್ಲೆಲ್ಲ ಬಿದ್ದಿದ್ದ. 'ಕಣ್ಣಿಗೆ ತಿಳಿಯುವ ಹಾಗೆ ಕಾಣುವ ಈ ಕೆಂಪು ಹೂ ಮರಗಳೆಂದರೆ ನನಗೆ ಆಗುವುದಿಲ್ಲ. ಅಂಥ ಕೆಂಪು ಬಣ್ಣ ನನಗೆ ಏನೆಲ್ಲ ಕೆಟ್ಟ ನೆನಪು ತರಿಸಿ ನನ್ನ ಮೂಡೆಲ್ಲವನ್ನೂ ಕೊಲ್ಲುತ್ತದೆ' ಎಂದು ಅವಳೆಡೆಗೆ ನೋಡಿದ. 'ಬರೀ ಬಣ್ಣಕ್ಕೆಲ್ಲ ಅಷ್ಟೊಂದು ಸೆನ್ಸಿಟೀವ್ ಆಗ್ತಾರಾ' ಎಂದು ಹೇಳಬೇಕೆನಿಸಿದ್ದನ್ನು ಹೇಳಲಾರದೆ; ತಾನು ಯಾವ ಮಾತಾಡಿದರೂ ಅದು ಯಾವ ಬಗೆಯಲ್ಲಿ ಅವನನ್ನು ಮುಟ್ಟುತ್ತದೋ ಎಂದು ಹೆದರಿ, 'ಈ ಹಾಳು ಫೀಮೆಲ್ ಲಾಂಗ್ವೆಜ್ ಅಷ್ಟೇ ನನಗೆ ಬರೋದು. ಹೆಣ್ಣುಗಂಡು ಕೂಡಿ ಕಟ್ಟಿದ ಭಾಷೆಯೇ ನನಗೆ ಬರೋದಿಲ್ವಲ್ಲಾ' ಎಂದುಕೊಳ್ಳುತ್ತಾ ಆತಂಕರಹಿತ ರೀತಿ ಅವನ ಮುಖವನ್ನು ಪ್ರೀತಿಯಿಂದ ದಿಟ್ಟಿಸಿದಳು. ಅವರಿಬ್ಬರ ತಲೆ ಮೇಲೆ ಹಸಿರು ಗಿಳಿಗಳ ಹಿಂಡು ಹಾರಾಡುತ್ತಾ ಹೋಗುತ್ತಿದ್ದವು. ಇವಳ ಜೊತೆ ಈ ದಿನ ಈ ಕ್ಷಣ ತಾನು ತನ್ನನ್ನು ಬಿಚ್ಚಿಕೊಳ್ಳದಿದ್ದರೆ ಎಲ್ಲವೂ ಹಾಳಾಗಿಬಿಡುತ್ತದೆಂದು ತಲ್ಲಣಿಸಿದಂತೆಯೇ ಅವನ ಅಂತರಂಗದಲ್ಲಿ ಅಲ್ಲಲ್ಲಿ ಆಗಾಗ ಹಾದುಹೋಗಿದ್ದ ಹುಡುಗಿಯರು ತಟಕ್ಕನೆ ಬಂದು ನಕ್ಕುಬಿಟ್ಟರು. ಎಲ್ಲ ಮೌನ ಮಾತಿನ ಚಿತ್ರಗಳೂ ಕನಸಿನ ಹಾಗೆ ಡಿಕ್ಕಿ ಹೊಡೆದು ವಿಕಾರ ಚಿತ್ರಗಳೇರ್ಪಟ್ಟು ಮಾತು ಹೊರಡಲಿಲ್ಲ. ಮೇಲೆ ಆಕಾಶ ನೀಲಿ ಸೀರೆ ಉಟ್ಟು ಆ ನೀಲಿ ಸೀರೆಯ ಮೇಲೆ ಮೋಡಗಳ ಬಿಳಿ ಹೂಗಳು ಹೆಣೆದುಕೊಂಡಿತ್ತು. ಅವನು ಆಕಾಶ ನೋಡುತ್ತ ಅವಳೇ ಮಾತಾಡಲಿ ಎಂದು ಕಾದ. ಇಬ್ಬರೂ ಹೊಸದಾಗಿ ಮದುವೆಯಾದ ಆದರೆ ಯಾವ ಪ್ರೀತಿ ಪ್ರೇಮ ಪರಿಚಯವಿಲ್ಲದ ಆತಂಕದ ಹೆಣ್ಣು ಗಂಡುಗಳ ಹಾಗೇ ನಿಂತೇ ಇದ್ದರು. ಕೋರ್ಸು ಮುಗಿಸಿ ಕ್ಯಾಂಪಸ್ಸಿನ ಬದುಕಿಗೆ ವಿದಾಯ ಹೇಳಲು ಆಗದೆ, ಅನಿವಾರ್ಯವಾಗಿ ಇದೆಲ್ಲವನ್ನೂ ಬಿಟ್ಟು ಊರಿಗೆ ಹಿಂತಿರುಗಬೇಕಾದ ಹಿಂಸೆಯಲ್ಲಿ ಅಲ್ಲಲ್ಲಿ, ಹುಡುಗಿಯರು ಲೇಡೀಸ್ ಹಾಸ್ಟೆಲ್ ಬಳಿ ಸುತ್ತಾಡುತ್ತಿದ್ದರು. ಅವರನ್ನೆಲ್ಲ ಕಣ್ಣಿಗೆ ಒಡಲಿಗೆ, ಆಳದ ಮನಸ್ಥಿತಿಯ ಯೌವನಕ್ಕೆ  ತುಂಬಿಕೊಳ್ಳಬೇಕು ಎಂಬ ಸೂಕ್ಷ್ಮ ಆ ನಡುವೆ ಅವನ ಬಳಿ ಸುಳಿದುಹೋಯಿತು. ಇವಳು ತಣ್ಣಗೆ ತುಟಿಯನ್ನು ಹಲ್ಲುಗಳ ನಡುಗೆ ಮೃದುವಾಗಿ ಮಕ್ಕಳ ಆಡಿಸುವ ಹಾಗೆ ಆಡಿಸುತ್ತಾ ಅವು ಇನ್ನೂ ಕೆಂಪಾಗುವಂತೆ ಮಾಡುತ್ತಾ ನಿಂತಿದ್ದಳು.